ದಿನಾಂಕಃ 12.12.2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ವಾದಿ ಪರ ಶ್ರೀ ಐ.ಎಸ್.ಡಿ ವಕೀಲರಿಂದಃ

9. ನನ್ನ ತಂದೆ ಹೆಸರು ರಂಗಪ್ಪ ಮತ್ತು ತಾಯಿಯ ಹೆಸರು ವೆಂಕಟಮ್ಮ ಎಂದರೆ ನಿಜ. ನನ್ನ ತಂದೆ ತಾಯಿ ಹುಟ್ಟಿ ಬೆಳೆದ ಊರು ಶಿಡ್ಲಘಟ್ಟ ಆಗಿರುತ್ತದೆ. ನನ್ನ ತಂದೆಗೆ 8 ಜನ ಮಕ್ಕಳು. ಅವರ ಹೆಸರು ಮೊದಲನೇಯವರು ಪಾರ್ವತಮ್ಮ, 2ನೇಯದಾಗಿ ಹನುಮಂತಯ್ಯ, 3ನೇಯವರು ಎಸ್.ನಟರಾಜ್, 4ನೇಯವರು ರುದ್ರಪ್ಪ, 5ನೇಯವರು ಭಾಗ್ಯಲಕ್ಷ್ಮೀ, ನಾನು 6ನೇ ಮಗ, 7 ಮತ್ತು 8ನೇ ಮಕ್ಕಳು ರುಕ್ಮಿಣಿ ಮತ್ತು ಗೀತ ಆಗಿರುತ್ತಾರೆ. 8 ಜನ ಮಕ್ಕಳಲ್ಲಿ ಪಾರ್ವತಮ್ಮ ಅವರನ್ನು ಹೊರತು ಪಡೆಸಿ ಉಳಿದ ಎಲ್ಲಾ ಮಕ್ಕಳು ಜೀವಂತ ಇರುತ್ತಾರೆ. ನನ್ನ ತಂದೆಯ ಅಕ್ಕನ ಹೆಸರು ಆದಿಲಕ್ಷ್ಮಮ್ಮ ಆಗಿರುತ್ತದೆ. ನನ್ನ ಮಾವನ ಹೆಸರು ಶ್ರೀನಿವಾಸಯ್ಯ ಆಗಿರುತ್ತದೆ. ಆದಿ ಲಕ್ಷ್ಮಮ್ಮ ಅವರ ಗಂಡನ ಹೆಸರು ಶ್ರೀನಿವಾಸಮೂರ್ತಿ ಯಾಗಿದ್ದು, ಅವರಿಗೆ ಮಕ್ಕಳು ಇರಲಿಲ್ಲ. ಆ ದಿಲಕ್ಷ್ಮಮ್ಮ ಹಾಗೂ ಶ್ರೀನಿವಾಸಮೂರ್ತಿ ಅವರಿಗೆ ಮಕ್ಕಳು ಇಲ್ಲದೇ ಇದ್ದುದರಿಂದ ನನ್ನ ತಂದೆ ಎಸ್. ನಟರಾಜ್ ಅವರನ್ನು ಅವರಿಗೆ ದತ್ತು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ಎಸ್. ನಟರಾಜ್ ಅವರು ಅವರ ಮನೆಯಲ್ಲಿರುತ್ತಿದ್ದರು ಎಂದು ಹೇಳುತ್ತಾರೆ. ಎಸ್. ನಟರಾಜ್ ಅವರನ್ನು ದತ್ತು ಕೊಟ್ಟ ನಂತರ ಶ್ರೀನಿವಾಸಮೂರ್ತಿ ಹಾಗೂ ಆದಿಲಕ್ಷ್ಮಮ್ಮ ಅವರು ಎಸ್. ನಟರಾಜ್ ಅವರನ್ನು ಬೆಳೆಸಿರುತ್ತಾರೆ ಎಂದರೆ ಎಸ್ ನಟರಾಜ್ ಅವರನ್ನು ದತ್ತು ಕೊಟ್ಟಿಲ್ಲ ಎಂದು ಹೇಳುತ್ತಾರೆ.

10. ನಟರಾಜ್ ಅವರ ಇನಿಷಿಯಲ್ ಎಸ್. ಆಗಿದ್ದು, ಉಳಿದ ಮಕ್ಕಳ ಇನಿಷಿಯಲ್ ಎಂ.ಆರ್. ಎಂಬುದಾಗಿ ಇರುತ್ತದೆ, ಕಾರಣ ನಟರಾಜ್ ಅವರು ಶ್ರೀನಿವಾಸ್ ಮೂರ್ತಿ ಅವರ ಮನೆಯಲ್ಲಿರುತ್ತಿದ್ದರು. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಬೇರೆಯವರ ಮನೆಯಲ್ಲಿ ಓದಿದಾಗ ಅಂತಹ ವ್ಯಕ್ತಿಯ ತಂದೆ ಹೆಸರು ಬದಲಾಗುವುದಿಲ್ಲ ಎಂದರೆ ನಿಜ. ಅದೇ ರೀತಿ ಸಾಮಾನ್ಯವಾಗಿ ತಂದೆ ತಾಯಿ ಬೇರೆಯವರ ಮಕ್ಕಳನ್ನು ತಮ್ಮ ಮಕ್ಕಳೆಂದು ಸರ್ಕಾರಿ ದಾಖಲೆಗಳಲ್ಲಿ ಉದ್ಘೋಷಣೆ ಮಾಡುವುದಿಲ್ಲ ಎಂದರೆ ನಿಜ. ನನ್ನ ಅಣ್ಣ ಹನುಮಂತಯ್ಯ ಮತ್ತು ರುದ್ರಪ್ಪ ಅವರಿಗೆ ಎಸ್ ನಟರಾಜ್ ಅವರು ಶ್ರೀನಿವಾಸಮೂರ್ತಿ ಹಾಗೂ ಆ ದಿಲಕ್ಷ್ಮಮ್ಮ ಅವರ ದತ್ತು ಪುತ್ರ ಎಂಬುವುದು ಗೊತ್ತಿತ್ತು ಎಂದರೆ ಸರಿಯಲ್ಲ.

11. ನನ್ನ ಅಕ್ಕ ಪಾರ್ವತಮ್ಮ ಅವರನ್ನು ಚಿಂತಾಮಣಿಯ ಎಸ್. ಶ್ರೀನಿವಾಸಯ್ಯ ಎಂಬುವವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಎಸ್. ಶ್ರೀನಿವಾಸಯ್ಯ ಎಂಬುವವರು ನನ್ನ ತಾಯಿಯ ತಮ್ಮ ಎಂದು ಹೇಳುತ್ತಾರೆ. ಎಸ್. ಶ್ರೀನಿವಾಸಯ್ಯ ಅವರ ತಂದೆಗೆ ಮೂರು ಜನ ಮಕ್ಕಳು ಎಂದರೆ ಐದು ಜನ ಮಕ್ಕಳು ಎಂದು ಹೇಳುತ್ತಾರೆ. ಅದರಲ್ಲಿ ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಅವರ ಹೆಸರು ಮೊದಲನೇಯವರು ನಾರಾಯಣಸ್ವಾಮಿ, 2ನೇಯವರು ಎಸ್. ಶ್ರೀನಿವಾಸಯ್ಯ, 3ನೇಯವರು ವೆಂಕಟೇಶ್ ಆಗಿರುತ್ತಾರೆ.

12. 1968 ರಲ್ಲಿ ನನ್ನ ಇನ್ನೊಬ್ಬರು ಅಕ್ಕ ಭಾಗ್ಯ ಲಕ್ಷ್ಮಿ ಅವರನ್ನು ಶ್ರೀನಿವಾಸಯ್ಯ ಅವರ ತಮ್ಮನಾದ ವೆಂಕಟೇಶ್ ಅವರಿಗೆ ನನ್ನ ತಂದೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ನಿಜ. 1968 ರಲ್ಲಿ ವೆಂಕಟೇಶ್ ಅವರು

ಮಹಾರಾಷ್ಟ್ರದಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. 1968 ರಲ್ಲಿ ಭಾಗ್ಯಲಕ್ಷ್ಮೀ ಅವರ ಮದುವೆಯಾದ ನಂತರ ವೆಂಕಟೇಶ್ ಅವರು ಭಾಗ್ಯಲಕ್ಷ್ಮೀ ಅವರನ್ನು ಮಹಾರಾಷ್ಟ್ರಕ್ಕೆ ಕರೆದುಕೊಂಡು ಅವರು ಅಲ್ಲಿಯೇ ನೆಲೆಸಿದ್ದರು ಎಂದರೆ ನಿಜ.

13. ದಿಃ 04.06.1972 ರಂದು ವಾದಿ ಜನಿಸಿದ್ದು, ಡಿಲೆವರಿಗಾಗಿ ಭಾಗ್ಯಲಕ್ಷ್ಮೀ ಅವರು ಚಿಂತಾಮಣಿಗೆ ಬಂದಿದ್ದರು ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ದೊಡ್ಡ ಅಕ್ಕ ಪಾರ್ವತಮ್ಮ ಹಾಗೂ ಶ್ರೀನಿವಾಸಯ್ಯ ಅವರಿಗೆ ಮದುವೆಯಾಗಿ ಸುಮಾರು ವರ್ಷಗಳಾಗಿದ್ದರು ಸಹ ಮಕ್ಕಳು ಆಗಿರಲಿಲ್ಲ ಎಂದರೆ ನಿಜ. ನನ್ನ ಅಕ್ಕ ಭಾಗ್ಯಲಕ್ಷ್ಮಿ ಅವರಿಗೆ ವಾದಿಯ ನಂತರ ಲತಾ ಮತ್ತು ರೇಖ ಎಂಬ ಇಬ್ಬರು ಮಕ್ಕಳು ಜನಿಸಿರುತ್ತಾರೆ ಎಂದರೆ ನಿಜ. 2ನೇ ಮಗು ಭಾಗ್ಯಲಕ್ಷ್ಮೀ ಅವರಿಗೆ 1977 ರಲ್ಲಿ ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಭಾಗ್ಯಲಕ್ಷ್ಮಿ ಅವರಿಗೆ 2ನೇ ಮಗು ಯಾವಾಗ ಜನಿಸಿರುತ್ತಾರೆ ಅಂದಾಜು ಹೇಳಲು ಬರುವುದಿಲ್ಲ. ವೆಂಕಟೇಶ್ ಹಾಗೂ ಭಾಗ್ಯಲಕ್ಷ್ಮೀ ಅವರಿಗೆ ವಾದಿ, ಲತಾ ಹಾಗೂ ರೇಖ ಜನಿಸಿದ ನಂತರ ಲತಾ ಹಾಗೂ ರೇಖ ಅವರನ್ನು ಮಹಾರಾಷ್ಟ್ರಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ನಿಜ. ವಾದಿ ಸಹ ಅಲ್ಲಿಯೇ ಇದ್ದರು ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ವಾದಿ ತಾನೂ ಹುಟ್ಟಿದಾಗಿನಿಂದ ಇಲ್ಲಿ ಬರುವವರೆಗೂ ಮಹಾರಾಷ್ಟ್ರದಲ್ಲಿಯೇ ಇದ್ದರು. ವೆಂಕಟೇಶ್ ಹಾಗೂ ಭಾಗ್ಯ ಲಕ್ಷ್ಮಿ ಅವರು ಲತಾ ಹಾಗೂ ರೇಖಾ ಅವರನ್ನು ನರ್ಸರಿ ಯಿಂದ ಕಾಲೇಜ್ ಸೇರಿಸುವವರೆಗೂ ಮಹಾರಾಷ್ಟ್ರದಲ್ಲಿಯೇ ಓದಿಸಿರುತ್ತಾರೆ. ಲತಾ ಹಾಗೂ ರೇಖಾ ಅವರನ್ನು ಓ

ದಿಸುವಾಗ ವೆಂಕಟೇಶ್ ಅವರ ಉದ್ಯೋಗಕ್ಕೆ ಯಾವುದೇ ತೊಂದರೆ ಆಗಿರುವು ದಿಲ್ಲ.

14. 1977 ರ ನಂತರ ಪಾರ್ವತಮ್ಮ ಹಾಗೂ ಶ್ರೀನಿವಾಸಯ್ಯ ಅವರು ವಾದಿಯನ್ನು ಚಿಂತಾಮಣಿಯಲ್ಲಿ ನರ್ಸರಿಗೆ ಸೇರಿಸಿದ್ದರು ಎಂದರೆ ಆಗ ನರ್ಸರಿ ಇರಲಿಲ್ಲ 1ನೇ ತರಗತಿಗೆ ಸೇರಿಸಿದ್ದರು ಎಂದು ಹೇಳುತ್ತಾರೆ. 1ನೇ ತರಗತಿಗೆ ಸೇರಿಸಲು ಸಾಮಾನ್ಯವಾಗಿ ವಿದ್ಯಾರ್ಥಿಯ ತಂದೆ ತಾಯಿ ಹೋಗಿ ದಾಖಲು ಮಾಡಿಸಬೇಕು ಎಂದರೆ ನಿಜ. ಸಾಮಾನ್ಯವಾಗಿ ತಂದೆ ತಾಯಿ ಹೋಗಲು ಆಗದೇ ಇದ್ದ ಪಕ್ಷದಲ್ಲಿ ಅವರ ಲೆಟರ್ ಆಫ್ ಅತಾರಿಟಿ ಪಡೆದುಕೊಂಡು ವಿದ್ಯಾರ್ಥಿಯನ್ನು ದಾಖಲು ಮಾಡಬೇಕು ಎಂದರೆ ನಿಜ. ವೆಂಕಟೇಶ್ ಹಾಗೂ ಭಾಗ್ಯಲಕ್ಷ್ಮಿ ಅವರು ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರಿಗೆ ವಾದಿಯನ್ನು ಶಾಲೆಗೆ ದಾಖಲು ಮಾಡಲು ಲೆಟರ್ ಆಫ್ ಅತಾರಿಟಿ ಕೊಟ್ಟಿಲ್ಲ ಎಂದರೆ ನಿಜ. ಅದೇ ರೀತಿ ವೆಂಕಟೇಶ್ ಹಾಗೂ ಭಾಗ್ಯಲಕ್ಷ್ಮಿ ಅವರು ಪಾರ್ವತಮ್ಮ ಹಾಗೂ ಶ್ರೀನಿವಾಸಯ್ಯ ಅವರಿಗೆ ವಾದಿಯನ್ನು ಶಾಲೆಗೆ ದಾಖಲು ಮಾಡಲು ಯಾವುದೇ ಪವರ್ ಆಫ್ ಅಟಾರ್ನಿ ಕೊಟ್ಟಿಲ್ಲ ಎಂದರೆ ನಿಜ. ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರು ತಾವೇ ತಂದೆ ತಾಯಿಯು ಸ್ಥಾನದಲ್ಲಿ ನಿಂತು ವಾದಿಯನ್ನು ಶಾಲೆಗೆ ದಾಖಲು ಮಾಡಿದ್ದರು ಎಂದರೆ ನಿಜ. ಶಾಲೆಗೆ ದಾಖಲು ಮಾಡುವಾಗ ಶ್ರೀನಿವಾಸಯ್ಯ ಅವರು ವಾದಿಯ ತಂದೆ ಎಂದು ಸಹಿ ಮಾಡಿದ್ದರು ಎಂದರೆ ನಿಜ. ಕಾರಣ ವಾದಿಯ ತಂದೆ ಮಹಾರಾಷ್ಟ್ರದಲ್ಲಿದ್ದು ಪ್ರತಿಯೊಂದು ಬಾರಿ ಇಲ್ಲಿಗೆ ಬರಲು ಆಗುವುದಿಲ್ಲ ಎಂದು ಶ್ರೀನಿವಾಸಯ್ಯ ಅವರೇ ಸಹಿ ಮಾಡಿರುತ್ತಾರೆ. ವಾದಿಯ ಯಾವುದೇ ಶಾಲಾ ದಾಖಲಾತಿಗಳಲ್ಲಿ

ವಾದಿಯ ತಂದೆ ತಾಯಿ ಹೆಸರು ವೆಂಕಟೇಶ್ ಹಾಗೂ ಭಾಗ್ಯಲಕ್ಷ್ಮಿ ಅವರ ಹೆಸರು ಇರುವುದಿಲ್ಲ ಎಂದರೆ ನಿಜ.

15. ನಮ್ಮ ಸಂಪ್ರದಾಯದ ಪ್ರಕಾರ ದತ್ತು ಕೊಡುವ ಸಂಪ್ರದಾಯ ಹೇಗೆ ಇರುತ್ತದೆ ಎಂದರೆ ನಮ್ಮ ಮನೆಯಲ್ಲಿ ದತ್ತು ಆಗಿಲ್ಲ ಆದ ಕಾರಣ ದತ್ತು ಸಂಪ್ರದಾಯ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಜಾತಿಯಲ್ಲಿ ದತ್ತು ಕೊಡುವುದು ಮತ್ತು ದತ್ತು ಪಡೆಯುವ ಸಂಪ್ರದಾಯ ಹೇಗೆ ಇರುತ್ತದೆ ಎಂದರೆ ನಾನು ಅದನ್ನು ನೋಡಿಯೇ ಇಲ್ಲ, ಆದಕಾರಣ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಭಾಗ್ಯಲಕ್ಷ್ಮಿ ಹಾಗೂ ಪಾರ್ವತಮ್ಮ ಅವರ ಮನೆಯಲ್ಲಿ ಏನೇನು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

16. ಕಾಶಿನಾಥ್ ಶಾಸ್ತ್ರಿ ಎಂದು ಚಿಂತಾಮಣಿಯಲ್ಲಿ ಪೌರೋಹಿತ್ಯ ಮಾಡುತ್ತಿದ್ದರುಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕಾಶಿನಾಥ್ ಶಾಸ್ತ್ರಿ ಎಂಬುವವರು ಶಿಡ್ಲಘಟ್ಟದಲ್ಲಿದ್ದರು ಎಂದು ಹೇಳುತ್ತಾರೆ. ಕಾಶಿನಾಥ್ ಶಾಸ್ತ್ರಿ ಅವರು ಪೌರೋಹಿತ್ಯ ಮಾಡುತ್ತಿದ್ದರು ಎಂದರೆನಿಜ. ಕಾಶಿನಾಥ್ ಶಾಸ್ತ್ರಿಗಳು ನಮ್ಮ ಕುಟುಂಬಕ್ಕೆ ಆತ್ಮೀಯರಾಗಿದ್ದರು ಎಂದರೆ ನಿಜ. ಅವರು ದಿಃ 06.11.1977 ರಂದು ಪಾರ್ವತಮ್ಮ ಅವರ ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅವರು ಶಿಡ್ಲಘಟ್ಟ ಬಿಟ್ಟು ಬೇರೆ ಎಲ್ಲೂ ಹೋಗುತ್ತಿರಲಿಲ್ಲ ಎಂಬುದು ನನಗೆ ಗೊತ್ತಿದೆ. ಕಾಶಿನಾಥ್ ಶಾಸ್ತ್ರಿಗಳು ಎಲ್ಲಾದರೂ ಹೋಗಬೇಕಾದರೇ ನನಗೆ ಹೇಳಿ ಹೋಗುತ್ತಿರಲಿಲ್ಲ.

17. ಪಾರ್ವತಮ್ಮ ಹಾಗೂ ಶ್ರೀನಿವಾಸಯ್ಯ ಅವರಿಗೆ ವಾದಿಯ ಮೇಲೆ ಚಿಕ್ಕಂದಿನಿಂದಲೂ ಪ್ರೀತಿ ಇರುತ್ತದೆ ಎಂದರೆ ನಿಜ, ಕಾರಣ ವಾದಿಯನ್ನು ಅವರು

ಸಾಕಿದ್ದರು. ಪಾರ್ವತಮ್ಮ ಹಾಗೂ ಶ್ರೀನಿವಾಸಯ್ಯ ಅವರಿಗೆ ವಾದಿ ಸಾಕು ಮಗಳಾಗಿರುತ್ತಾರೆ. 1977 ರಲ್ಲಿ ಭಾಗ್ಯಲಕ್ಷ್ಮಿ ಅವರು ಗರ್ಭತಾಳಿದ್ದರಿಂದ ಪಾರ್ವತಮ್ಮ ಹಾಗೂ ಶ್ರೀನಿವಾಸಯ್ಯ ಅವರು ಭಾಗ್ಯಲಕ್ಷ್ಮಿ ಅವರನ್ನು 1ನೇ ಮಗಳನ್ನು ದತ್ತು ಕೊಡಬೇಕೆಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವೆಂಕಟೇಶ್ ಹಾಗೂ ಭಾಗ್ಯಲಕ್ಷ್ಮಿ ಅವರು ತಮ್ಮ 1ನೇ ಮಗಳನ್ನು ಪಾರ್ವತಮ್ಮ ಹಾಗೂ ಶ್ರೀನಿವಾಸಯ್ಯ ಅವರಿಗೆ  ದತ್ತು ಕೊಡಲು ಒಪ್ಪಿರುತ್ತಾರೆ ಎಂದರೆ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರು ದತ್ತು ಕೊಡಲು ಕೇಳಿರುವುದಿಲ್ಲ, ಆದಕಾರಣ ಒಪ್ಪುವ ಪ್ರಶ್ನೆ ಇಲ್ಲ ಎಂದು ಹೇಳುತ್ತಾರೆ.

18. ವೆಂಕಟೇಶ್ ಹಾಗೂ ಭಾಗ್ಯಲಕ್ಷ್ಮಿ ಅವರು ವಾದಿಯನ್ನು ದತ್ತುಕೊಡಲು ಒಪ್ಪಿದ್ದರಿಂದ ದಿಃ 06.11.1977 ರಂದು ಸಂಪ್ರದಾಯ ಮಾಡಿ ವಾದಿಯನ್ನು ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರಿಗೆ  ದತ್ತು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದತ್ತು ಕೊಡುವ ಸಂಪ್ರದಾಯವನ್ನು ಕಾಶಿನಾಥ್ ಶಾಸ್ತ್ರಿಗಳು ನೆರವೇರಿಸಿರುತ್ತಾರೆ ಎಂದರೆ ದತ್ತನ್ನು ಕೊಟ್ಟಿಯೇ ಇಲ್ಲ, ಅದಕಾರಣ ಸಂಪ್ರದಾಯ ನಡೆಸುವ ಪ್ರಶ್ನೆಯೇ ಇಲ್ಲ  ಎಂದು ಹೇಳುತ್ತಾರೆ. ವಾದಿಯ ದತ್ತು ಕೊಡುವ ಸಮಾರಂಭಕ್ಕೆ ಸ್ನೇಹಿತರು ಹಾಗೂ ಸಂಬಂಧಿಕರು ಬಂದಿದ್ದರು ಎಂದರೆ ಸಂಪ್ರದಾಯವೇ ಆಗಿಲ್ಲ, ಸ್ನೇಹಿತರು ಹಾಗೂ ಸಂಬಂಧಿಕರು ಬರುವ ಪ್ರಶ್ನೆ ಇಲ್ಲ ಎಂದು ಹೇಳುತ್ತಾರೆ.

19. ದಿಃ 06.11.1977 ರ ನಂತರ ವಾದಿ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರ ಮನೆಯಲ್ಲಿಯೇ ತಮ್ಮ ಮದುವೆಯಾಗುವವರೆಗೂ ಬೆಳೆದರು. ವಾದಿಯ ಮದುವೆಯನ್ನು ನಟರಾಜ್ ಅವರ ಮಗ ಪ್ರಸಾದ್ ಅವರ

ಜೊತೆ ಮಾಡಬೇಕೆಂದು ನಿಶ್ಚಯಿಸಿದ್ದರು ಎಂದರೆ ನಿಜ. ನಂತರ ಪ್ರಸಾದ್ ಹಾಗೂ ವಾದಿಯ ಮದುವೆಯಾಗಿದ್ದು, ನಾನು ಮತ್ತು ನಮ್ಮ ಕುಟುಂಬದವರು ಮದುವೆಗೆ ಹೋಗಿರುತ್ತೇವೆ ಎಂದರೆ ನಿಜ. ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರೇ ವಾದಿಯ ಕನ್ಯಾದಾನವನ್ನು ಮಾಡಿರುತ್ತಾರೆ ಎಂದರೆ ನಿಜ. ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರು ತಂದೆಯ ಸ್ಥಾನದಲ್ಲಿ ನಿಂತು ವಾದಿಯ ಮದುವೆ ಮಾಡಿರುತ್ತಾರೆ  ಎಂದರೆ ನಿಜ. ಸಾಕ್ಷಿ ಮುಂದುವರೆದು ವಾದಿಯನ್ನು ಸಾಕಿದ್ದರು ಎಂದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.